ಹಣವನ್ನು ಬಿಡುಗಡೆ ಮಾಡಿದರೆ ಕಟ್ಟಡದ ಕಾಮಗಾರಿಗಳನ್ನು ಪೂರ್ಣಗೊಳಿಸುವುದಕ್ಕೆ ಸಾಧ್ಯವಾಗುತ್ತದೆ. ನಮ್ಮ ಜಿಲ್ಲೆಗೆ 64 ಲಕ್ಷ ರೂಪಾಯಿಗಳ ಗ್ರಾಂಟ್ ಲ್ಯಾಪ್ಸ್ ಎಂದು ಏನಿದೆ, ಅದು ಕರ್‌ಸ್ಪಾಂಡೆನ್ಸ್ ಸ್ಟೇಜ್‌ನಲ್ಲಿ ಬರುತ್ತಿದೆ. ಮಾನ್ಯ ಅಧ್ಯಕ್ಷರೆ, ನಾನು ಮೊದಲನೆಯದಾಗಿ ಈ ಕ್ರೀಡಾ ಹಾಸ್ಟೆಲ್ ಬಂದ್ ಮಾಡಿರುವಂಥಾದ್ದು ಏನಿದೆ, ಅದನ್ನು ಆರಂಭ ಮಾಡಬೇಕು, ಈ ಕ್ರೀಡಾ ಕಟ್ಟಡಗಳಿಗೆ ಸಂಬಂಧಪಟ್ಟಂತೆ ಗ್ರಾಂಟ್ ರಿಲೀಸ್ ಆಗಿರುವಂಥಾದ್ದು ಲ್ಯಾಪ್ಸ್ ಆಗಿಲ್ಲವೆಂದು ಪರಿಗಣಿಸಿ ಅದನ್ನು ಬಿಡುಗಡೆ ಮಾಡಬೇಕೆಂದು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುತ್ತಿರುವುದು ಈ ಪ್ರಶ್ನೆಗೆ ಸಂಬಂಧಪಡದೇ ಇದ್ದರೂ ಕೆಲವು ವಿಚಾರಗಳನ್ನು ಅವರ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಪ್ರಸ್ತಾಪ ಮಾಡಿದ್ದಾರೆ. ಈಗ ನನ್ನ ಹತ್ತಿರ ಮಾಹಿತಿ ಇರುವಂತೆ ಕ್ರೀಡಾ ಹಾಸ್ಟೆಲ್ ಗಳ ವಿಚಾರ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ. ಇದು ಯುವಜನ ಮತ್ತು ಕ್ರೀಡಾ ಸಚಿವರ ವ್ಯಾಪ್ತಿಗೆ ಬರುತ್ತದೆ. ಇನ್ನು ಉಳಿದ ವಿಚಾರಗಳನ್ನು ಏನು ಪ್ರಸ್ತಾಪ ಮಾಡಿದ್ದಾರೆ, ಅದರ ಬಗ್ಗೆ ಮುಂದೆ ಪರಿಶೀಲಿಸುತ್ತೇವೆ.

ಆರೋಗ್ಯ ಇಲಾಖೆಯಿಂದ ಸರಬರಾಜು ಆಗುವ ಔಷಧಿಗಳ ಗುಣಮಟ್ಟ.

415(3911) ಶ್ರೀ ಅಂಜನಮೂರ್ತಿ (ನೆಲಮಂಗಲ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ರಾಜ್ಯದಲ್ಲಿ ಆರೋಗ್ಯ ಇಲಾಖೆಯಿಂದ ಆಸ್ಪತ್ರೆಗಳಿಗೆ ಆರೋಗ್ಯ ಕೇಂದ್ರಗಳಿಗೆ ಆರೋಗ್ಯ ಘಟಕಗಳಿಗೆ ಕಳಪೆ ಔಷಧಿಗಳು ಸರಬರಾಜು ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಸರಬರಾಜು ಮಾಡಿರುವ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಡಾಃ ಎ.ಬಿ. ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಅಂಜನಮೂರ್ತಿ :— ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದ ಆರೋಗ್ಯ ಸಚಿವರು ವೈದ್ಯರಾಗಿರುವಂಥವರು, ಆದರೆ ಇವತ್ತು ದುರದೃಷ್ಟವಶಾತ್ ರಾಜ್ಯ ಎಲ್ಲಾ

ಸರ್ಕಾರಿ ಆಸ್ಪತ್ರೆಗಳು ರೋಗ ಪೀಡಿತವಾಗಿದೆ. ಇದಕ್ಕೆ ಕಾರಣ ಇಲಾಖೆಯಿಂದ ಸರಬರಾಜಾಗುವಂತಹ ಔಷಧಗಳು ಕಳಪೆಗುಣಮಟ್ಟದ್ದಾಗಿದ್ದು, ಸಾಮಾನ್ಯ ಜನರು, ಬಡವರು, ದೊಡ್ಡ ದೊಡ್ಡ ಖಾಸಗಿ ಆಸ್ಪತ್ರೆಗಳಿಗೆ ಹಣವನ್ನು ಕೊಟ್ಟು ವೈದ್ಯ ಸೇವೆಯನ್ನು ಪಡೆಯುವುದಕ್ಕಾಗುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯದಲ್ಲಿ ಏನು ಡ್ರಗ್ಸ್ ಕಂಟ್ರೋಲರ್ ರವರ ಔಷಧಗಳ ನಿಯಂತ್ರಣ ಇಲಾಖೆ ಎಂದು ಏನಿದೆ ಇದರ ಬಗ್ಗೆ ಸತ್ಯವನ್ನು ಹೇಳಬೇಕೆಂದರೆ ಇದನ್ನು ಡ್ರಗ್ಸ್ ಕಂಟ್ರೋಲ್ ಎನ್ನುವುದಕ್ಕಿಂತ ಅದು ಔಷಧ ತಯಾರಕರ ಮತ್ತು ವಿತರಕರ ಕಂಟ್ರೋಲ್ ಆಗಿದೆ ಎಂದರೆ ತಪ್ಪಾಗಲಾರದು. ರಾಜ್ಯದಲ್ಲಿ ಅನೇಕ ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳ ಸಂಖ್ಯೆ ಹೆಚ್ಚಿರುವುದಕ್ಕೆ ಕಾರಣ ಇಲಾಖೆಯಿಂದ ಸರಬರಾಜು ಮಾಡುವಂತಹ ಔಷಧಗಳು ಒಳ್ಳೆಯ ಗುಣಮಟ್ಟವಿಲ್ಲದಿರುವುದರಿಂದ ಖಾಯಿಲೆಗಳು ವಾಸಿಯಾಗುತ್ತಿಲ್ಲ. ಇದುವರೆಗೂ ಡ್ರಗ್ ಕಂಟ್ರೋಲರ್‌ಗಳು ಎಷ್ಟು ಕಡೆ, ಎಷ್ಟು ಔಷಧ ತಯಾರಕರ ಮೇಲೆ ಕಾನೂನು ಪ್ರಕಾರ ಕ್ರಮ ಜರುಗಿಸಿದ್ದಾರೆ? ಇದಕ್ಕೆ ಏನಾದರೂ ಕಡಿವಾಣವನ್ನು ಹಾಕಿದ್ದಾರಾಯೇ? ಎಂಬ ಬಗ್ಗೆ ಮಾನ್ಯ ಸಚಿವರು ದಯಮಾಡಿ ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ) :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳುವಂತಹ ಪ್ರಶ್ನೆಯನ್ನು ಪ್ರತ್ಯೇಕವಾಗಿ ಕೇಳಿದರೆ ಅದಕ್ಕೆ ನಾವು ಉತ್ತರವನ್ನು ಒದಗಿಸಬಹುದು. ಈಗ ತಾವು ಕೇಳಿರುವಂತಹ ಪ್ರಶ್ನೆ ಏನೆಂದರೆ ಕರ್ನಾಟಕ ರಾಜ್ಯದಲ್ಲಿ ಆರೋಗ್ಯ ಇಲಾಖೆಯಿಂದ ಆಸ್ಪತ್ರೆಗಳಿಗೆ, ಆರೋಗ್ಯ ಕೇಂದ್ರಗಳಿಗೆ, ಆರೋಗ್ಯ ಘಟಕಗಳಿಗೆ ಕಳಪೆ ಔಷಧಿಗಳು ಸರಬರಾಜು ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂದು ಕೇಳಿದ್ದೀರಿ. ಅದಕ್ಕೆ ಉತ್ತರವನ್ನು ಬಂದಿರುವುದಿಲ್ಲವೆಂದು ಕೊಟ್ಟಿದ್ದೇವೆ. ತಾವು ನಿರ್ದಿಷ್ಟವಾದಂತಹ ಯಾವುದಾದರೂ ಪ್ರಕರಣಗಳು ಗಮನಕ್ಕೆ ಬಂದಿದ್ದರೆ, ಅದನ್ನು ನಮಗೆ ಕಳುಹಿಸಿಕೊಟ್ಟರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಆರ್. ನೀಲಕಂಠಪ್ಪ :— ಮಾನ್ಯ ಅಧ್ಯಕ್ಷರೆ, ಇಲ್ಲಿ ಆಡಳಿತ ಪಕ್ಷದವರಿಗೆ ಉತ್ತರ ಪಟ್ಟಿಯನ್ನು ಕಳುಹಿಸಿಕೊಟ್ಟಿಲ್ಲ, ನಮ್ಮ ಟೇಬಲ್ ಉತ್ತರಪಟ್ಟಿ ಮೇಲೆ ಇಟ್ಟಿಲ್ಲ. ತಾವು ಆಡಳಿತ ಪಕ್ಷದವರಿಗೂ ಉತ್ತರ ಕೊಡಿಸುವಂತಹ ವ್ಯವಸ್ಥೆಯನ್ನು ಮಾಡಿ. ನಾವು ಉಪ ಪ್ರಶ್ನೆಯನ್ನು ಕೇಳಬೇಕೆಂದರೆ ವಿಷಯವಿಲ್ಲದೇ ಏನು ಕೇಳುವುದಕ್ಕಾಗುವುದಿಲ್ಲ. ನಮ್ಮ ಭಾಗದಲ್ಲಿ ಯಾರಿಗೂ ಉತ್ತರ ಪಟ್ಟಿ ಬಂದಿಲ್ಲ ಇದನ್ನು ಕೊಡುವಂತಹ ಸೌಜನ್ಯವಿಲ್ಲದಿದ್ದರೆ ನಾವು ಏಕೆ ಇಲ್ಲಿ ಕುಳಿತುಕೊಳ್ಳಬೇಕು.

ಅಧ್ಯಕ್ಷರು :— ಮಾನ್ಯ ನೀಲಕಂಠಪ್ಪನವರೇ, ಇದು ತಡೆ ಹಿಡಿಯಲಾರದ ಪ್ರಶ್ನೆಯಾಗಿದೆ, ಸಭೆಯಲ್ಲಿ ಮೊದಲ ದಿವಸ ಯಾವಾಗ ಪ್ರಸ್ತಾಪವಾಗಬೇಕೆಂದು ಇರುತ್ತದೊ,

ಆಗ ಕೊಟ್ಟಿರುತ್ತಾರೆ, ಈ ಪ್ರಶ್ನೆಗಳು ನಾನಾ ಕಾರಣಗಳಿಂದ ತಡೆ ಹಿಡಿಯಲಾರದ ಪ್ರಶ್ನೆ ಎಂದು ಆಗಿ, ಮುಂದಿನ ದಿವಸಗಳಲ್ಲಿ ಬಂದಿರುತ್ತದೆ.

ಶ್ರೀ ಬಿ.ಆರ್. ನೀಲಕಂಠಪ್ಪ :— ಮಾನ್ಯ ಅಧ್ಯಕ್ಷರೆ, ಉತ್ತರ ಪಟ್ಟಿಯನ್ನು ವಿರೋಧ ಪಕ್ಷದವರಿಗೆ ಕೊಟ್ಟಿದ್ದಾರೆ, ನಮಗೆ ಕೊಟ್ಟಿಲ್ಲವೆಂದರೆ ಹೇಗೆ?

ಅಧ್ಯಕ್ಷರು :— ಇವತ್ತು ಸಭೆಯ ಮುಂದೆ ಬಂದಿರುವಂಥಾದ್ದು ತಡೆ ಹಿಡಿಯಲಾದ ಪ್ರಶ್ನೆಗಳಾಗಿವೆ.

ಶ್ರೀ ಅಂಜನ ಮೂರ್ತಿ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ನಿರ್ದಿಷ್ಟವಾದಂತಹ ಪ್ರಕರಣಗಳು ಇದ್ದರೆ ಹೇಳಿ ಎಂದು ಹೇಳಿದರು. ನಾನು ಹೇಳುವಂಥಾದ್ದು ಇದರ ನಗ್ನ ಚಿತ್ರ ಪ್ರತಿಯೊಬ್ಬರಿಗೂ ಗೊತ್ತಿರುವಂಥಹ ವಿಚಾರವಾಗಿದೆ. ಈ ಔಷಧಿಗಳ ಗುಣಮಟ್ಟದ ಬಗ್ಗೆ ಪರೀಕ್ಷಿಸಲು ಡ್ರಗ್ ಕಂಟ್ರೋಲ್ ಇಲಾಖೆ ಎಂದು ಇದೆ, ಇದು ಸತ್ತು ಹೋಗಿರುವಂತಹ, ನಿರ್ಜೀವವಾಗಿರುವಂತಹ ಸಂಸ್ಥೆಯಾಗಿದೆ. ತಮ್ಮ ಮುಖಾಂತರ ನನ್ನ ಒಂದು ಕಿವಿ ಮಾತನ್ನು ಮಾನ್ಯ ಸಚಿವರಿಗೆ ಹೇಳಬಯಸುವುದೇನೆಂದರೆ ಅವರ, ಶಾಂತಮೂರ್ತಿತನವನ್ನು ಬಿಟ್ಟು ಉಗ್ರ ರೂಪಕ್ಕೆ ಬಂದರೆ, ಇದರ ನಿಜ ಸಂಗತಿ, ಸತ್ಯ ಏನು, ಎಂಬುದು ಹೊರ ಬರುತ್ತದೆ. ಇದರಿಂದ ರೋಗಿಗಳು ತುಂಬಾ ತೊಂದರೆ ಅನುಭವಿಸುತ್ತಿದ್ದಾರೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾರೆಂಬುದನ್ನು ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ಮಾನ್ಯ ಅಧ್ಯಕ್ಷರೆ, ಸರ್ಕಾರದ ವತಿಯಿಂದ ಸರಬರಾಜಾಗುವ ಔಷಧಗಳು ಒಳ್ಳೆಯ ಗುಣಮಟ್ಟದಲ್ಲಿರಬೇಕು, ಸಕಾಲದಲ್ಲಿ ತಲುಪಬೇಕು, ಎನ್ನುವ ಬಗ್ಗೆ ತಜ್ಞರಾದಂತಹ ಮಾಕಪುರ್ ಸಮಿತಿಯನ್ನು ನೇಮಕ ಮಾಡಿದ್ದು, ಅವರಿಂದ ವರದಿ ಬಂದಿದೆ. ಈ ವರದಿಯ ಆಧಾರದ ಮೇಲೆ ಪ್ರತಿಯೊಂದು ಸರಬರಾಜು ಮಾಡುವಂತಹ ಔಷಧಿಗಳು, ಅದರ ತಯಾರಕರು, ಮತ್ತು ಅದನ್ನು ಪ್ಯಾಕ್ ಮಾಡುವಂಥವರು ಯಾರು? ಇವೆಲ್ಲಾ ವಿಚಾರಗಳ ಬಗ್ಗೆ ಅನೇಕ ಕ್ರಮಗಳನ್ನು ಕೈಗೊಂಡಿದೆ. ಇದರ ಬಗ್ಗೆ ಕಳಪೆ ಗುಣಮಟ್ಟದ್ದರ ಬಗ್ಗೆಯೂ ಸರ್ಕಾರ ಕ್ರಮಗಳನ್ನು ಕೈಗೊಂಡಿದೆ. ಈ ಹಿನ್ನೆಲೆಯಲ್ಲಿ ಒಳ್ಳೆಯ ಗುಣಮಟ್ಟದ ಔಷಧಗಳು, ಸಕಾಲದಲ್ಲಿ ಹೋಗುತ್ತಿದೆ ಎನ್ನುವ ವಿಶ್ವಾಸ ನಮಗಿದೆ. ಇದರಲ್ಲಿ ಏನಾದರೂ ವ್ಯತ್ಯಾಸಗಳು ಕಂಡು ಬಂದರೆ ತಾವು ಹೇಳಿದಂತೆ ಅಗತ್ಯವಾದಂತಹ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎ. ರಾಮದಾಸ್ :— ಮಾನ್ಯ ಅಧ್ಯಕ್ಷರೆ, ಸರ್ಕಾರ ಉತ್ತರವನ್ನು ಹೇಳುವಾಗ ಗಮನಕ್ಕೆ ಬಂದಿದೆಯೇ, ಎನ್ನುವಂತಹ ವಿಚಾರವನ್ನು ಕೇಳಿದರೆ ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ಆದರೆ ಈ ಇಲಾಖೆಯಲ್ಲಿ ಮಾನ್ಯ ಮಂತ್ರಿಯವರು, ಮಾನ್ಯ ಮುಖ್ಯಮಂತ್ರಿಯವರು, ಮತ್ತು ಇಲಾಖಾ ಪ್ರಧಾನ ಕಾರ್ಯದರ್ಶಿಯವರಿಗೂ ಕಳೆದ ವರ್ಷ ಸುಮಾರು ಎರಡೂವರೆ ಕೋಟಿ ರೂಪಾಯಿಗಳ ಔಷಧಗಳು ಅದರಲ್ಲೂ ವಿಶೇಷವಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಹೆಚ್.ಓ.ಗಳು ಕಳಪೆ ಔಷಧಗಳನ್ನು, ಉಪಕರಣಗಳನ್ನು ಪರ್ಚೆಸ್ ಮಾಡಿ, ಇದಕ್ಕೆ ಸಂಬಂಧಪಟ್ಟಹಾಗೆ ತನಿಖೆ ಮಾಡಬೇಕೆಂದು ಡಾಕ್ಯುಮೆಂಟ್ ಗಳನ್ನು ಸರ್ಕಾರಕ್ಕೆ ಕೊಟ್ಟಿದೇವೆ, ಸರ್ಕಾರ ಇದರ ಬಗ್ಗೆ ಈಗಾಗಲೇ ಅಧಿಕಾರಿಗಳನ್ನು ಕಳುಹಿಸಿ ತನಿಖೆ ಮಾಡಿಸಿದೆ. ಅವರು ರಿಟೈರ್ ಆಗುವುದಕ್ಕಿಂತ ಮುಂಚೆಯೇ ವಿಚಾರವೇನೆಂದು ತನಿಖೆಯ ಮುಖಾಂತರ ಸ್ವಲ್ಪ ತಿಳಿದಿದೆ. ಆದರೆ ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಗಮನಕ್ಕೆ ಬಂದಿಲ್ಲವೆಂದು ಹೇಳುವುಂಥಾದ್ದು ಬಹಳ ಶೋಚನೀಯ ವಿಚಾರವಾಗಿದೆ. ಉದಾಹರಣೆಗೆ ಬೆಂಗಳೂರು ಗ್ರಾಮಾಂತರದಲ್ಲಿ ನಿರ್ದಿಷ್ಟವಾದಂತಹ ರೀತಿಯಲ್ಲಿ ಒಂದು ವರ್ಷದಲ್ಲಿ ಆಗಿರುವಂಥಾದ್ದು ತಮ್ಮ ಮುಂದಿಟ್ಟಿದ್ದು ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ಈ ವ್ಯಕ್ತಿಗಳು ರಿಟೈರ್ ಆಗಿ ಹೋಗಿದ್ದಾರೆ, ಅವರ ಬಗ್ಗೆ ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ? ಕಳಪೆ ಔಷಧಿಗಳು ಸೀಜ್ ಮಾಡಿರುವಂಥಾದ್ದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ದಯಮಾಡಿ ತಿಳಿಸಬೇಕು.

ಶ್ರೀ ಅಂಜನಮೂರ್ತಿ :— ಮಾನ್ಯ ಅಧ್ಯಕ್ಷರೆ, ಬೆಂಗಳೂರು ಗ್ರಾಮಾಂತರ ಡಿ.ಹೆಚ್.ಓ. ಮೇಲೆ ಬೇಕಾದಷ್ಟು ಅಪಾದನೆಗಳು ಇವೆ ಆದರೆ ಇದುವರೆವಿಗೂ ಯಾವ ಕ್ರಮಗಳನ್ನು ಸರ್ಕಾರದವರು ತೆಗೆದುಕೊಂಡಿಲ್ಲ. ಅವರ ಚರಿತ್ರೆಯನ್ನು ಕೇಳಿದರೆ ದೊಡ್ಡ ಕರ್ಮಕಾಂಡ ಪುಸ್ತಕವನ್ನು ಬರೆಯಬೇಕಾಗುತ್ತದೆ. ಇದರ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನನ್ನ ಕೋರಿಕೆಯಾಗಿದೆ.

ಶ್ರೀ ಬಿ.ಎನ್. ಬಚ್ಚೇಗೌಡ :— ಮಾನ್ಯ ಅಧ್ಯಕ್ಷರೆ, ನಮ್ಮ ನಗರ ಜಿಲ್ಲೆಗಳಲ್ಲೂ ಹೀಗೆ ಆಗಿದೆ, ಜಡ್ .ಪಿ. ಮುಖಾಂತರ ಔಷಧಗಳನ್ನು ಕೊಡುವಂತಹ ವ್ಯವಸ್ಥೆ ಇದೆ. ಪ್ರಾಥಮಿಕ ಆರೋಗ್ಯ ಘಟಕದ ಮೂಲಕ ಈ ರೀತಿಯಾಗಿ ನಿರ್ದಿಷ್ಟವಾಗಿ ಔಷಧಗಳನ್ನು ಕೊಡುವಂಥಾದ್ದು ಇದೆ. ಇದು ಬರೀ ನಮ್ಮ ಜಿಲ್ಲೆಯಲ್ಲಿ ಮಾತ್ರವಲ್ಲ ಇಡೀ ರಾಜ್ಯದಲ್ಲಾಗುತ್ತಿದೆ. ಸರ್ಕಾರಿ ಆಸ್ಪತ್ರೆಗಳಿಗೆ ಸರಬರಾಜು ಮಾಡುವ ಔಷಧಿಗಳು ಕಳಪೆಮಟ್ಟದವು, ಗುಣಮಟ್ಟವಿಲ್ಲದೆ ಸರಬರಾಜಿನಲ್ಲು ಕೊರತೆ ಇದ್ದು ಔಷಧಿಗಳನ್ನು ಕೊಡದೆ ಕೇವಲ ಚೀಟಿಗಳನ್ನು ಕೊಡಲಾಗುತ್ತಿದೆ. ಒಂದೊಂದು ಸರ್ಕಾರಿ ಆಸ್ಪತ್ರೆಗಳ ಹತ್ತಿರ ಹತ್ತು ಔಷಧ ಮಾರಾಟ ಅಂಗಡಿಗಳು ಇವತ್ತು ನಮ್ಮ ತಾಲ್ಲೂಕುಗಳಲ್ಲಿವೆ. ಅಲ್ಲಿ ಹೋಗಿ, ರೋಗಿ ಹಣಕೊಟ್ಟು ಔಷಧಿ ತರಬೇಕು,

ಆನಂತರ ರೋಗಿಗಳಿಗೆ ವೈದ್ಯರು ಚಿಕಿತ್ಸೆ ಕೊಡಬೇಕೆನ್ನುವ ಈ ಪರಿಸ್ಥಿತಿ ಇಡಿ ರಾಜ್ಯದಲ್ಲಿ ಎಲ್ಲಾ ಆಸ್ಪತ್ರೆಗಳಲ್ಲಿವೆ. ಸರ್ಕಾರಿ ಆಸ್ಪತ್ರೆಗಳಿಗೆ ಶ್ರೀಮಂತರು ಹೋಗುವುದಿಲ್ಲ, ಬಡವರೇ ಹೋಗುವುದು, ಬಡವರಿಗೆ ಔಷಧ ಸಿಗುವುದಿಲ್ಲವೆಂದರೆ ಸರ್ಕಾರ ಮಾಡುವುದಾದರೂ ಏನು? ಸರ್ಕಾರ ಕೊಡುತ್ತಿರುವ ಹಣ ಇವತ್ತು ಕೆಳಹಂತದ ಜನರಿಗೆ ತಲುಪುತ್ತಿಲ್ಲ, ಡಿಹೆಚ್‌ಓ ಏನು ಮಾಡುತ್ತಿದ್ದಾರೋ ಗೊತ್ತಿಲ್ಲ, ಯಾವ ಪೂಲ್‌ನಲ್ಲಿ ಎಷ್ಟು ಹಣ ಹೋಗುತ್ತದೊ ಗೊತ್ತಿಲ್ಲ, ಈ ಬಗ್ಗೆ ಮಂತ್ರಿಗಳ ಹತ್ತಿರ ಮಾಹಿತಿ ಇದೆಯೊ, ಇಲ್ಲವೋ ಗೊತ್ತಿಲ್ಲ ಮಾನ್ಯ ಸದಸ್ಯರಾದ ಅಂಜನಮೂರ್ತಿಯವರು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ, ಇದು ಇಡೀ ರಾಜ್ಯಕ್ಕೆ ಅನ್ವಯವಾಗುವಂತಹದ್ದು, ಇದರ ಬಗ್ಗೆ ಅರ್ಧಗಂಟೆ ಚರ್ಚೆಯಾಗಬೇಕು.

ಶ್ರೀ ಹಾಗೋಡು ತಿಮ್ಮಪ್ಪ :— ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಶೇಕಡ 60ರಷ್ಟು ಔಷಧಿಗಳನ್ನು ಜಿಲ್ಲಾಪಂಚಾಯಿಯವರು ಖರೀದಿ ಮಾಡಿ ಆಸ್ಪತ್ರೆಗಳಿಗೆ ಕೊಡುತ್ತಾರೆ, ಉಳಿದ ಶೇಕಡ 40 ರಷ್ಟು ಔಷಧಿಯನ್ನು ಸರ್ಕಾರದ ಮಳಿಗೆಯಿಂದ ಸರಬರಾಜಾಗುತ್ತದೆ. ಇಲ್ಲಿ ಪ್ರಶ್ನೆ ಏನೆಂದರೆ ಕಳಪೆಮಟ್ಟದ ಔಷಧಿಗಳು ಸರಬರಾಜು ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಲಾಗಿದೆ, ಇಲ್ಲವೆಂದು ಉತ್ತರ ಕೊಡಲಾಗಿದೆ. ಮಾನ್ಯ ಸದಸ್ಯರಾದ ರಾಮದಾಸ್ ರವರು ಒಂದು ಪ್ರಕರಣವನ್ನು ಗಮನಕ್ಕೆ ತಂದಿದ್ದಾರೆ, ಆ ಬಗ್ಗೆ ಮಾಹಿತಿಯನ್ನು ತರಿಸಿ ಪರಿಶೀಲಿಸಲಾಗುವುದು. ಇಲ್ಲಿರುವ ಪ್ರಶ್ನೆ ಸೀಮಿತವಾಗಿದೆ, ಮಾನ್ಯ ಸದಸ್ಯರ ಗಮನಕ್ಕೆ ಅಂತಹ ಪ್ರಕರಣಗಳು ಕಂಡುಬಂದಲ್ಲಿ ಅದನ್ನು ನಾವು ವಿಚಾರಣೆಗೆ ಒಳಪಡಿಸುತ್ತೇವೆ.

ಶ್ರೀ ಎ. ರಾಮದಾಸ್ :— ಇಡೀ ಒಂದು ವರ್ಷದಲ್ಲಿ ಆಸ್ಪತ್ರೆಗಳಿಗೆ ಕಳಪೆಮಟ್ಟದ ಔಷಧಗಳು ಸರಬರಾಜಾಗಿರುವ ಬಗ್ಗೆ ಆ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ನೌಕರರೇ ವಿಶೇಷವಾಗಿ ಸರ್ಕಾರದ ಗಮನಕ್ಕೆ ತಂದಿದ್ದಾರೆ ಫಾರ್ಮಸಿಸ್ಟ್‌ಗಳು, ಔಷಧಿಗಳನ್ನು ನಮ್ಮ ಕೇಂದ್ರದಲ್ಲಿ ತೆಗೆದುಕೊಂಡು ನಮಗೆ ಕೊಡಿ ಎಂದು ಹೇಳುತ್ತಿದ್ದಾರೆಂದು ಹೇಳಿದ್ದಾರೆ, ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ, ಬೇರೆ ವಿಚಾರ ಬೇಕಾಗಿಲ್ಲ.

ಶ್ರೀ ಹಾಗೋಡು ತಿಮ್ಮಪ್ಪ :— ಅಲ್ಲಿ ಔಷಧಿಗಳ ಖರೀದಿಯಲ್ಲಿ ಪರೋಕ್ಷವಾಗಿದೆಯೇ ವಿನಃ ಔಷಧಿಗಳ ಗುಣಮಟ್ಟದ ವಿಚಾರ ಬಂದಿಲ್ಲ.

ಶ್ರೀ ಸುಣಗಾರ್ ಶರಣಪ್ಪ ತಿಪ್ಪಣ್ಣ :— ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ ಗುಣಮಟ್ಟದ ಔಷಧಗಳನ್ನು ಆಸ್ಪತ್ರೆಗಳಿಗೆ ಸರಬರಾಜು ಮಾಡಲಾಗುತ್ತಿದೆ ಎನ್ನುವ ಆಶ್ವಾಸನೆಯನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಅಲ್ಲಿರುವ ವೈದ್ಯರು ಸರ್ಕಾರದ ಕೆಲಸದ ಜೊತೆಗೆ ಖಾಸಗಿಯಾಗಿ ಕೆಲಸ ಮಾಡಿಕೊಂಡು ಸರ್ಕಾರಿ ಆಸ್ಪತ್ರೆಯ ಔಷಧಿಗಳನ್ನು ಖಾಸಗಿಯಾಗಿ ಉಪಯೋಗಿಸಿಕೊಂಡು ಹಣ ಮಾಡುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ನಾನು ಕೇಳಬಯಸುತ್ತೇನೆ.

ಶ್ರೀ ಹಾಗೋಡು ತಿಮ್ಮಪ್ಪ :— ಮಾನ್ಯ ಸದಸ್ಯರು ಕೇಳಿದ್ದು, ಈ ಪ್ರಶ್ನೆಗೆ ಸಂಬಂಧಿಸಿದ್ದಲ್ಲ, ಆದರು ಕೂಡ ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ಪ್ರತಿಯೊಂದು ಆಸ್ಪತ್ರೆಯಲ್ಲಿ ವೀಕ್ಷಣ ಸಮಿತಿ ಇದೆ ಅಲ್ಲಿ ಇಂತಹ ವಿಚಾರವನ್ನು ಚರ್ಚೆ ಮಾಡಿ ಸರ್ಕಾರದ ಗಮನಕ್ಕೆ ತಂದರೆ ಪರಿಶೀಲಿಸಲಾಗುವುದು.

ಶ್ರೀ ಎನ್. ಯೋಗೀಶ್ ಭಟ್ :— ಮಾನ್ಯ ಸಚಿವರು ಸಂದರ್ಶನ ಸಮಿತಿಯನ್ನು ರಚಿಸಲಾಗಿದೆ ಎಂದು ಹೇಳಿದರು. ಎಲ್ಲೂ ಮಾಡಿಲ್ಲ, ಸದನಕ್ಕೆ ಮಂತ್ರಿಗಳು ತಪ್ಪು ಮಾಹಿತಿಯನ್ನು ಕೊಡಬಾರದೆನ್ನುವ ಉದ್ದೇಶದಿಂದ ಇದನ್ನು ಹೇಳುತ್ತಿದ್ದೇನೆ. ಎರಡನೆಯದಾಗಿ, ಸರಬರಾಜು ಮಾಡಿರುವ ಔಷಧಿಯಿಂದ ಏನು ಹಾನಿಯಾಗುತ್ತಿದೆ ಎನ್ನುವ ಬಗ್ಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಮಂಗಳೂರಿನ ವೆನ್‌ಲಾಕ್ ಮಹಿಳಾ ಆಸ್ಪತ್ರೆಗೆ ಅತ್ಯಂತ ಗೌರವವಿದೆ, ಅದೊಂದು ಪ್ರತಿಷ್ಠಿತ ಆಸ್ಪತ್ರೆ, ಒಳ್ಳೆಯ ವೈದ್ಯರುಗಳಿದ್ದು, ಒಳ್ಳೆಯ ರೀತಿಯ ಚಿಕಿತ್ಸೆಯನ್ನು ಕೊಡುತ್ತಿದ್ದಾರೆ. ಮೊನ್ನೆ, ಮಹಮದ್ ಜುಬೇದಾರ್ ಎಂಬುವರ ಮಗಳಾದ ರುಬಿನ ಎಂಬ 12 ವರ್ಷದ ಹೆಣ್ಣುಮಗಳಿಗೆ ಸರಬರಾಜಾದ ಟೆನ್ನಿಡ್ಯೂರ್ ಎನ್ನುವ ಚುಚ್ಚುಮದ್ದನ್ನು ಕೊಟ್ಟ 15 ನಿಮಿಷದೊಳಗೆ ಅವಳ ಎರಡು ಕಾಲುಗಳು ನಿಸ್ತೇಜವಾಗಿದೆ, ಅವಳು ನಡೆಯುವ ಸ್ಥಿತಿಯಲ್ಲಿಲ್ಲ. ಇಂತಹ ಒಂದು ದುಸ್ಥಿತಿ ಉಂಟಾದಾಗ ಪೋಲಿಸರಿಗೆ ದೂರನ್ನು ಕೊಡಲಾಗಿದೆ, ಸರ್ಕಾರದ ಗಮನವನ್ನು ಸೆಳೆಯುವಂತಹ ಅನೇಕ ಪ್ರಶ್ನೆಗಳನ್ನು ನಾನು ಕೇಳಿದ್ದೇನೆ. ಕಳಪೆ ಔಷಧಿಗಳ ಸರಬರಾಜಿನ ವಿಷಯ ಬಂದದ್ದರಿಂದ ಇದನ್ನು ಉಲ್ಲೇಖ ಮಾಡಿದ್ದೇನೆ, ಇದರ ಬಗ್ಗೆ ತನಿಖೆಯಾಗಬೇಕು ಜೊತೆಗೆ ಆ ಔಷಧಿಯನ್ನು ಸರಬರಾಜು ಮಾಡಿದ ಕಂಪನಿಯ ಬಗ್ಗೆ ವಿಚಾರಣೆ ಮಾಡಿ, ತೊಂದರೆಗೆ ಸಿಕ್ಕಿರುವ ಆ ಹೆಣ್ಣು ಮಗುವಿಗೆ ಪರಿಹಾರವನ್ನು ಕೊಡಬೇಕೆಂದು ಸರ್ಕಾರವನ್ನು ಈ ಮೂಲಕ ಕೇಳಬಯಸುತ್ತೇನೆ.

ಶ್ರೀ ಹಾಗೋಡು ತಿಮ್ಮಪ್ಪ :— ಆ ಔಷಧಿಯಿಂದಲೇ ಮಾನ್ಯ ಸದಸ್ಯರು ಹೇಳುವಂತೆ ರೋಗಿಯ ಮೇಲೆ ದುಷ್ಪರಿಣಾಮವಾಗಿದ್ದರೆ ಖಂಡಿತವಾಗಿಯೂ ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ :— ಮಾನ್ಯ ಮಂತ್ರಿಗಳು ಎಲ್ಲಾ ಆಸ್ಪತ್ರೆಗಳಲ್ಲಿ ಸಂದರ್ಶನ ಸಮಿತಿಯನ್ನು ಶಾಸಕರ ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ ಎಂದು ಹೇಳಿದರು, ಆ ಸಮಿತಿ ಯಾವಾಗ ರಚನೆಯಾಯಿತು? ಅದರಲ್ಲಿ ಯಾರ್ಯಾರು ಇದ್ದಾರೆ? ಇಲ್ಲಿಯವರೆಗೆ ಚರ್ಚೆಯಾದ ವಿಚಾರಗಳಲ್ಲಿ ಎಷ್ಟನ್ನು ಕೈಗೆತ್ತಿಕೊಂಡು ವಿಚಾರಣೆ ಮಾಡಿದೆ ಎನ್ನುವುದರ ಬಗ್ಗೆ ಮಂತ್ರಿಗಳು ಸ್ವಲ್ಪ ಬೆಳಕನ್ನು ಚೆಲ್ಲಿದರೆ ಒಳ್ಳೆಯದು.

ಶ್ರೀ ವಿ. ಕೃಷ್ಣಪ್ಪ :— ಸಮಿತಿ ಇದೆ, ಸಮಿತಿ ಆಸ್ಪತ್ರೆಗೆ ಹೋಗಿ ವೀಕ್ಷೆ ಮಾಡಿದಾಗ, ಆಸ್ಪತ್ರೆಯ ಸುತ್ತ ಔಷಧಿಗಳ ಅಂಗಡಿಗಳು ತೆರೆದು ಅಲ್ಲಿ ರಕ್ತವನ್ನು

ಕೊಡುವುದರ ಬದಲು ರಕ್ತವನ್ನು ಕುಡಿಯುತ್ತಿದ್ದಾರೆ, ಆಸ್ಪತ್ರೆಗೆ ಸರಬರಾಜು ಮಾಡಿದ ಪ್ರತಿಯೊಂದು ಔಷಧಿಯು ಕೂಡ ಆ ಅಂಗಡಿಗಳಲ್ಲಿ ಇರುತ್ತವೆ, ಅಲ್ಲಿಂದ ರೋಗಿಗಳು ಕೊಂಡುಕೊಳ್ಳಬೇಕಾದ ಪರಿಸ್ಥಿತಿ ಇದೆ, ಇದನ್ನು ಖುದ್ದಾಗಿ ಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ಆದರೆ ಇದುವರೆಗೆ ಈ ವಿಷಯವನ್ನು ಸರಿಪಡಿಸುವ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ, ಅಲ್ಲಿಯ ವೈದ್ಯರು ಅದನ್ನೆ ಮುಂದುವರೆಸುತ್ತಿದ್ದಾರೆ. ಆಸ್ಪತ್ರೆಗಳು ಬಡವರಿಗೋಸ್ಕರವಿದೆಯೇ? ಅಲ್ಲಿಗೆ ಹೋದರೆ ಪರಿಸ್ಥಿತಿ ನರಕಕ್ಕಿಂತ ಕೆಳಮಟ್ಟದಲ್ಲಿದೆ ಅದನ್ನು ಇನ್ನು ಮೇಲಾದರೂ ಸರಿಮಾಡಬೇಕೆಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ಆಸ್ಪತ್ರೆಯಲ್ಲಿ ಗುಣಮಟ್ಟದ ಚಿಕಿತ್ಸೆಯಿರಬೇಕು, ವೈದ್ಯರು ಆರೋಪಕ್ಕೆ ಒಳಗಾಗದ ರೀತಿಯಲ್ಲಿ ಚಿಕಿತ್ಸೆಯನ್ನು ಕೊಡಬೇಕೆನ್ನುವುದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ನಮ್ಮ ಮುಂದಿರುವ ಪ್ರಶ್ನೆ ಸೀಮಿತವಾಗಿದೆ. ಆಸ್ಪತ್ರೆಯಲ್ಲಿ ವ್ಯವಸ್ಥಿತವಾದ ರೀತಿಯಲ್ಲಿ ಚಿಕಿತ್ಸೆ ದೊರೆಯುವಂತಾಗಲು ಕ್ರಮಕ್ಕೆಗೊಳ್ಳುವ ಅಗತ್ಯತೆ ಇದೆ, ಅದಕ್ಕೋಸ್ಕರ ಅನೇಕ ಕ್ರಮಗಳನ್ನು ನಾವು ಈಗಾಗಲೇ ಕೈಗೊಂಡಿದ್ದೇವೆ.

ಶ್ರೀ ಎ.ಆರ್. ಕೃಷ್ಣಮೂರ್ತಿ :— ನನ್ನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸರ್ಕಾರಿ ಆಸ್ಪತ್ರೆಯಲ್ಲಿ ಮಗುವಿಗೆ ಚುಚ್ಚುಮದ್ದನ್ನು ನೀಡಿದ್ದರಿಂದ ಚರ್ಮವೆಲ್ಲಾ ಸುಟ್ಟು ಕರುಕಲಾಗಿದೆ. ಆ ಮಗುವನ್ನು ಬಾಳೆ ಎಲೆಯ ಮೇಲೆ ಮಲಗಿಸಿರುವುದು ಪತ್ರಿಕೆಯಲ್ಲಿ ಪ್ರಕಟವಾಗಿದೆ, ಆ ವಿಚಾರವಾಗಿ ಸರ್ಕಾರ ಗಮನಹರಿಸಿ ಗಂಭೀರವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ಆ ಆಸ್ಪತ್ರೆಯಲ್ಲಿ ನೀಡಲಾದ ದೋಷಪೂರಿತ ಔಷಧಿಯಿಂದಲೇ ಈ ರೀತಿ ಮಗುವಿಗೆ ಏನಾದರೂ ಆಗಿದ್ದರೆ ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುತ್ತೇವೆ. ಆ ರೀತಿಯಾಗಲು ಅನೇಕ ಕಾರಣಗಳಿರುತ್ತವೆ.

ಶ್ರೀ ಆಂಜನಮೂರ್ತಿ :— ಇದು ಸೀಮಿತವಾದ ಪ್ರಶ್ನೆ, ಬೇರೆ ಪ್ರಶ್ನೆ ಉದ್ಭವವಾಗುವುದಿಲ್ಲವೆಂದು ಆಗಲೇ ಮಾನ್ಯ ಸಚಿವರು ಹೇಳಿದರು. ಈಗಾಗಲೇ ಇಲಾಖೆಯಡಿಯಲ್ಲಿ ಏನು ಡ್ರಗ್ ಕಂಟ್ರೋಲರ್ ಎನ್ನುವ ಸಂಸ್ಥೆ ಇದೆ ಅದು ಔಷಧಿ ತಯಾರಕರ ಹಾಗೂ ವಿತರಕರ ನಿಯಂತ್ರಣದಲ್ಲಿದೆ ಎಂದು ನಾನು ಆಗಲೇ ಹೇಳಿದೆ.

11.40 ಪಿ.ಎ ಂ.

ಅವರು ನಿಗಧಿ ಮಾಡತಕ್ಕಂಥ ಬೆಲೆಯನ್ನು ಕೊಟ್ಟು ಸಾಮಾನ್ಯ ಜನರಾಗಲೀ, ಬಡವರಾಗಲೀ ಔಷಧಿಯನ್ನು ಕೊಂಡುಕೊಳ್ಳಲು ಸಾಧ್ಯವಾಗುವುದಿಲ್ಲ. ಅದರ ಬಗ್ಗೆಯೂ ಸರ್ಕಾರ ಸೂಕ್ತ ಗಮನ ಹರಿಸಿ, ಅವರ ಮೇಲೆ ನಿಬಂಧನೆ ಹೇರಬೇಕು ಎಂದು ನನ್ನ ಮನವಿ.

ಶ್ರೀ ಕಾಗೋಡು ತಿಮ್ಮಪ್ಪ :— ಈ ಪ್ರಶ್ನೆ ಇದಕ್ಕೆ ಸಂಬಂಧಪಡುವುದಿಲ್ಲ. ಆದರೂ ಕೂಡ, ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಡ್ರಗ್ ಕಂಟ್ರೋಲ್ ಕಛೇರಿಯಲ್ಲಿ ಅಂಥ ಅಕ್ರಮಗಳು ನಡೆಯುತ್ತಿದ್ದರೆ ಸರ್ಕಾರ ಅದರ ಬಗ್ಗೆ ಖಂಡಿತವಾಗಿಯೂ ವಿಚಾರಣೆ ಮಾಡುತ್ತದೆ.

ಕಳೆದ 2 ವರ್ಷಗಳಿಂದ ನಗರ, ಜಿಲ್ಲಾ ಮತ್ತು ಗ್ರಾಮೀಣ ಆಸ್ಪತ್ರೆಗಳ ಅಭಿವೃದ್ಧಿಗಾಗಿ ಮಾಡಿರುವ ವೆಚ್ಚ.

418(3788) ಶ್ರೀ ಎನ್. ಯೋಗೀಶ ಭಟ್ (ಮಂಗಳೂರು) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ನಗರ, ಜಿಲ್ಲಾ ಮತ್ತು ಗ್ರಾಮೀಣ ಆಸ್ಪತ್ರೆಗಳ ಅಭಿವೃದ್ಧಿಗೆ ವಿಶ್ವಬ್ಯಾಂಕು ಹಾಗೂ ರಾಜ್ಯ ಸರಕಾರದ ನೆರವಿನಿಂದ 1998-99 ಮತ್ತು 1999-2000 ರಲ್ಲಿ ಮಾಡಿದ ವೆಚ್ಚ ಎಷ್ಟು ಹಾಗೂ ಆಗಿರುವ ಅಭಿವೃದ್ಧಿ ಎಷ್ಟು?

ಆ) ಮಂಗಳೂರಿನ ಜಿಲ್ಲಾ ಆಸ್ಪತ್ರೆಗಳಾದ ವೆನ್‌ಲಾಕ್ ಲೇಡಿ ಗೋಷನ ಆಸ್ಪತ್ರೆಗಳ ಅಭಿವೃದ್ಧಿಗೆ 1998-99 ಮತ್ತು 1999-2000 ರಲ್ಲಿ ಮಾಡಿದ ವೆಚ್ಚ ಎಷ್ಟು ಅಭಿವೃದ್ಧಿಗೆ ಹಾಕಿಕೊಂಡಿರುವ ಯೋಜನೆಗಳು ಯಾವುವು ಕೊರತೆಯಿಂದ ಸಿಬ್ಬಂದಿಗಳ ದಾದಿಯರ, ಫಾರ್ಮಸಿಸ್ಟ್‌ರನ್ನು ನೇಮಕ ಮಾಡಲು ಇಲಾಖೆ ಕೈಗೊಂಡ ಕ್ರಮಗಳೇನು?

ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಆರೋಗ್ಯ ವ್ಯವಸ್ಥೆಗಳ ಅಭಿವೃದ್ಧಿ ಯೋಜನೆಯಡಿ ರಾಜ್ಯದಲ್ಲಿಯ ಒಟ್ಟು 230 ಆಸ್ಪತ್ರೆಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದ್ದು 1998-99ನೇ ಸಾಲಿನಲ್ಲಿ ರೂ. 95.18 ಕೋಟಿಗಳನ್ನು ಮತ್ತು 1999-2000 ಸಾಲಿನಲ್ಲಿ ರೂ. 121.05 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

ಇದುವರೆಗೆ 60 ಆಸ್ಪತ್ರೆಗಳ ಸಿವಿಲ್ ಕಾಮಗಾರಿಯು ಪೂರ್ಣಗೊಂಡಿದ್ದು ಕಾರ್ಯನಿರ್ವಹಿಸಲು ಇಲಾಖೆಗೆ ವಹಿಸಿಕೊಡಲಾಗಿದೆ. ಹಾಗೂ ಮಾರ್ಚ್ 2001ರ ಅಂತ್ಯಕ್ಕೆ ಒಟ್ಟು 125 ಆಸ್ಪತ್ರೆ ಕಾಮಗಾರಿಯನ್ನು ಪೂರ್ಣಗೊಳಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ.

ವಿಶ್ವಬ್ಯಾಂಕ್ ನೆರವಿನ ಭಾರತ ಜನಸಂಖ್ಯೆ ಯೋಜನೆ-9(ಕ) ಯೋಜನೆಯಡಿ ಗ್ರಾಮೀಣ ಪ್ರದೇಶಗಳಲ್ಲಿ ಉಪ ಕೇಂದ್ರಗಳ ಕಟ್ಟಡಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಜಿಲ್ಲಾ ತರಬೇತಿ ಕೇಂದ್ರಗಳ ಕಟ್ಟಡಗಳ ನಿರ್ಮಾಣಕ್ಕಾಗಿ 1998-99ನೇ